# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರು ರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು – 560 002.**

ಸಂಖ್ಯೆ: ಹೆನಿನಯೋ/ಪಿಆರ್/308/2016-17 ದಿನಾಂಕ:23-6-2016.

## ಕಛೇರಿ ಆದೇಶ

ವಿಷಯ: 20000 ಚ.ಮೀ. ಹಾಗೂ ಅದಕ್ಕಿಂತ ಹೆಚ್ಚಿನ ವಿಸ್ತೀರ್ಣವುಳ್ಳ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ಮತ್ತು ಪರವಾನಿಗೆ ನೀಡುವ ಹಂತದಲ್ಲಿ SEIAA ಇಲಾಖೆಯ ನಿರಾಕ್ಷೇಪಣಾ ಪತ್ರವನ್ನು ಪಡೆಯುವ ಬಗ್ಗೆ.

ಉಲ್ಲೇಖ: **1)** ಪಾಲಿಕೆಯ ಸುತ್ತೋಲೆ ಸಂಖ್ಯೆ:ಹೆನಿನಯೋ/ಪಿಆರ್/2916/12-13, ದಿನಾಂಕ: 22-02-2013

**2)** ಸದಸ್ಯ ಕಾರ್ಯದರ್ಶಿಗಳು, SEIAA, ಕರ್ನಾಟಕ ರವರ ಪತ್ರ ಸಂಖ್ಯೆ: SEIAA 10 MISC 2013, ದಿನಾಂಕ: 28-06-2014 ಮತ್ತು ದಿನಾಂಕ: 31-05-2016

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸುತ್ತೋಲೆಯಲ್ಲಿ ಬಹು ಅಂತಸ್ತು ಎತ್ತರದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡುವ ವೇಳೆ ವಿವಿಧ ಅವಶ್ಯಕ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವಲ್ಲಿ ಬಹಳಷ್ಟು ಸಮಯ ವ್ಯಯವಾಗಿ, ಕಟ್ಟಡ ಕಾಮಗಾರಿ ಪ್ರಾರಂಭಿಸಲು ಬಹಳಷ್ಟು ಸಮಯ ವಿಳಂಬವಾಗುತ್ತಿರುವುದಾಗಿ CREDAI ಪದಾಧಿಕಾರಿಗಳು ತಮ್ಮ ತೊಂದರೆಯನ್ನು ವ್ಯಕ್ತಪಡಿಸಿದ್ದರ ಮೇರೆಗೆ ಬಹು ಎತ್ತರದ ಕಟ್ಟಡಗಳಿಗೆ ನಕ್ಷೆ ಮಂಜೂರಾತಿಯನ್ನು ನೀಡುವ ಸಮಯದಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ನಕ್ಷೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ವೇಳೆಯಲ್ಲೇ ಪಡೆಯಲು ಹಾಗೂ ಉಳಿದಂತೆ ಅಗತ್ಯವಿರುವ ಸಕ್ಷಮ ಪ್ರಾಧಿಕಾರಗಳಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ, ಭಾರತೀಯ ವೈಮಾನಿಕ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಸ್ಕಾಂ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಮುನ್ನ ಸಲ್ಲಿಸುವ ನಿಬಂಧನೆಗೆ ಒಳಪಡಿಸಿ ನಕ್ಷೆ ಮಂಜೂರಾತಿ ನೀಡಲು ಆದೇಶಿಸಲಾಗಿರುತ್ತದೆ.

ಉಲ್ಲೇಖ (2) ರ ಪತ್ರಗಳಲ್ಲಿ ಸದಸ್ಯ ಕಾರ್ಯದರ್ಶಿಗಳು, SEIAA - ಕರ್ನಾಟಕ ರವರು ಉಲ್ಲೇಖ (1) ರ ಸುತ್ತೋಲೆಯಲ್ಲಿ ಕಟ್ಟಡ ನಕ್ಷೆ ಮಂಜೂರಾತಿಗೆ SEIAA ಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದನ್ನು ಕಡ್ಡಾಯಗೊಳಿಸಿರುವುದಿಲ್ಲವೆಂದು ಆಕ್ಷೇಪಿಸಿ, 20000 ಚ.ಮೀ. ಹಾಗೂ ಅದಕ್ಕೂ ಹೆಚ್ಚಿನ ನಿರ್ಮಾಣ ವಿಸ್ತೀರ್ಣವಿರುವ ಎಲ್ಲಾ ಕಟ್ಟಡ ಅಭಿವೃದ್ಧಿ ಯೋಜನೆಗಳಿಗೆ ನಕ್ಷೆ ಮಂಜೂರಾತಿ ನೀಡುವಾಗ SEIAA - ಕರ್ನಾಟಕ ರವರಿಂದ ಪರಿಸರ ತೀರುವಳಿ ಪಡೆಯುವುದನ್ನು ಕಡ್ಡಾಯಗೊಳಿಸಲು ಕೋರಿರುತ್ತಾರೆ.

ಆದುದರಿಂದ, ಉಲ್ಲೇಖ (1) ರ ಸುತ್ತೋಲೆಯನ್ನು ಮಾರ್ಪಡಿಸಿ ಇನ್ನು ಮುಂದೆ 20000 ಚ.ಮೀ. ಹಾಗೂ ಅದಕ್ಕೂ ಹೆಚ್ಚಿನ ನಿರ್ಮಾಣ ವಿಸ್ತೀರ್ಣ ಇರುವ ಎಲ್ಲಾ ಕಟ್ಟಡ ಅಭಿವೃದ್ಧಿ ಯೋಜನೆಗಳಿಗೆ ನಕ್ಷೆ ಮಂಜೂರಾತಿ / ಪರವಾನಗಿ ನೀಡುವ ಸಮಯದಲ್ಲಿ SEIAA - ಕರ್ನಾಟಕ ರವರಿಂದ ಪರಿಸರ ತೀರುವಳಿ (Environmental Clearance) ಪಡೆಯುವುದನ್ನು ಕಡ್ಡಾಯಗೊಳಿಸಿ ಆದೇಶಿಸಿದೆ.

22/6/2016

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**

1) ವಿಶೇಷ ಆಯುಕ್ತರು (ಯೋಜನೆ) ರವರಿಗೆ
2) ಅಪರ / ಜಂಟಿ ಆಯುಕ್ತರು (ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪಯರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ವಲಯ ) ರವರುಗಳಿಗೆ

3) ಪ್ರಧಾನ ಅಭಿಯಂತರರು ರವರಿಗೆ
4) ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ
5) ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ, ದಕ್ಷಿಣ ಮತ್ತು ಸ್ಕ್ವಾಡ್) ರವರಿಗೆ
6) ಮುಖ್ಯ ಅಭಿಯಂತರರು (ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪಯರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ವಲಯ ) ರವರುಗಳಿಗೆ
7) ಉಪ ಆಯುಕ್ತರು (ಕಂದಾಯ) ರವರಿಗೆ
8) ಸಹಾಯಕ ನಿರ್ದೇಶಕರು (ನಗರ ಯೋಜನೆ – ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪಯರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ವಲಯ ) ರವರುಗಳಿಗೆ
9) ಕಛೇರಿ ಕಡತಕ್ಕೆ